# ಶರಣು ವೆಂಕಟರಮಣ ನಿನ್ನ ಚರಣವ ನಂಬಿದೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 527.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 323.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** The wordings in Ref.2 are similar as in Ref. 1 except one word which is marked in yellow highlights.
5. **Note:** Singer has followed the lyrics as in Ref. 2.

ರಾಗ ಸುರುಟಿ ಆದಿ ತಾಳ

ಶರಣು ವೆಂಕಟ ರಮಣ ನಿನ್ನ
ಚರಣವ ನಂಬಿದೆ ನಾನು || ಪ ||

ಕರುಣಾ ಸಾಗರ ಕಾಮಿತ ಫಲವೀವ
ಶರಣ ಭಕ್ತರ ಕಾವ ಗರುಡ ವಾಹನ ದೇವ || ಅಪ ||

ಭಕ್ತವತ್ಸಲ ಹರಿಯೆ ನಮ್ಮ
ಭವ ದುರಿತ ಪರಿಹಾರನೆ
ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಶರಣ ಭಕ್ತರ ಕಾವ ಸುರ ಮುನಿಗಳ ದೇವ || 1 ||

ಪಾಪವಿನಾಶಿನಿ ತೀರ್ಥ ನಮ್ಮ
ಪಾತಕವ ಪರಿಹರನೆ (ಪರಿಹರಿಸೆ)
ಶ್ರೀ ವೆಂಕಟಗಿರಿ ಶ್ರೀವಾಸ
ಕೋನೆರಿ ತೀರ್ಥಾದಿವಾಸ ನಿವಾಸ || 2 ||

ದೇಶಕಧಿಕವಾದ ನಮ್ಮ
ಶೇಷಗಿರಿಯಲಿ ವಾಸ
ಶ್ರೀ ವೆಂಕಟಗಿರಿ ತಿರುಮಲೇಶ
ದಾಸ ದಾಸರ ಸಲಹುವ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

**ಭವ ದುರಿತ ಪರಿಹಾರನೆ** – ಸಂಸಾರದ ಪಾಪಗಳನ್ನೆಲ್ಲ ತೊಡೆದುಹಾಕುವವನೆ.

**ಸುರ ಮುನಿಗಳ ಕಾವ** – ದೇವತೆಗಳನ್ನೂ, ಮುನಿಗಳನ್ನೂ ಕಾಪಿಡುವವನೆ.

**ಪಾಪವಿನಾಶಿನಿ ತೀರ್ಥ** – ಬೆಟ್ಟದ ಮೇಲಿರುವ ಒಂದು ಕೊಳ.

**ಕೋನೇರಿ ತೀರ್ಥಾಧಿವಾಸ** – ಸ್ವಾಮಿ ಪುಷ್ಕರಿಣೀತೀರ್ಥವನ್ನು ಇಲ್ಲಿ ಕೋನೇರಿ (ಕೋನೇರು) ಎಂದು ಕರೆಯಲಾಗಿದೆ; ಈ ಕೊಳದ ದಂಡೆಯ ಮೇಲೇ ವೆಂಕಟೇಶ್ವರನ ಗುಡಿಯಿರುವುದು.

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti
**Sub-Category:** Vishnu, srinivasa, paramatma, karuna, garuda, phala, Krishna, bhava, sura, muni, brahmanda, Tirupati,
**Pravachana:** NA
**Explanation:** NA